ಶ್ರೀ ಅಮಿತಗತಿ ಆಚಾರ್ಯದೇವ ವಿರಚಿತ

# ಸಾಮಾಯಿಕ ಪಾಠ





ಪ್ರಕಾಶಕರು :

ದಿಗಂಬರ ಜೈನ ಟ್ರಸ್ಟ - ಅಧ್ಯಾತ್ಮ ಪ್ರಕಾಶನ ಸಂಸ್ಥೆ

ಬೆಂಗಳೂರು.

ಶ್ರೀ ಅಮಿತಗತಿ ಆಚಾರ್ಯದೇವ ವಿರಚಿತ

# ಸಾಮಾಯಿಕ ಪಾಠ

ಸಂಪಾದಕರು :

ಶ್ರೀ ರಾಮಜಿ ಮಾಣೇಕಚಂದ ದೋಶಿ

ಅನುವಾದ :

ಸೌ. ಧವಲಶ್ರೀ ಅಣ್ಣಾಸಾಹೇಬ ಪಾಟೀಲ, ಬೆಳಗಾವಿ.

ಪ್ರಕಾಶಕರು :

ದಿಗಂಬರ ಜೈನ ಟ್ರಸ್ಟ್ - ಅಧ್ಯಾತ್ಮ ಪ್ರಕಾಶನ ಸಂಸ್ಥೆ

ಬೆಂಗಳೂರು.

ಪ್ರಥಮಾವೃತ್ತಿ : ೧೦೦೦ ಪ್ರತಿಗಳು
ದ್ವಿತೀಯಾವೃತ್ತಿ : ೧೦೦೦ ಪ್ರತಿಗಳು
**ತೃತೀಯಾವೃತ್ತಿ : ೨೦೦೦ ಪ್ರತಿಗಳು**
ವಿಜಯಾ ದಶಮಿ
ದಿ. ೨೬-೧೦-೨೦೦೧

ಬೆಲೆ : **ಐದು ರೂಪಾಯಿ**

ದೊರಕುವ ಸ್ಥಳ :
**ದಿಗಂಬರ ಜೈನ ಟ್ರಸ್ಟ - ಅಧ್ಯಾತ್ಮ ಪ್ರಕಾಶನ ಸಂಸ್ಥೆ**
೧೪೧, ರಂಗಸ್ವಾಮಿ ಗುಡಿ ಬೀದಿ - ಬೆಂಗಳೂರು.

**ಶ್ರೀ ಬಿ. ಜಿ. ಬಜೇಡಿ,** 'ಮಾತಾಪಿತಾ ಸದನ''
೪೬೭೯, ಎಸ್.ಪಿ.ಎಮ್. ರೋಡ, ಬೆಳಗಾವಿ - ೧.
ಫೋನ : ೪೬೬೯೬೬.

ಮುದ್ರಕರು :
**ಮಾಲಗತ್ತಿ ಆಫಸೆಟ್ ಪ್ರಿಂಟರ್ಸ**
ಸದಾಶಿವನಗರ, ಬೆಳಗಾವಿ.
ಫೋನ : ೪೭೩೬೭೪.

# ಪ್ರಕಾಶಕೀಯ

ಶ್ರೀ ಅಮಿತಗತಿ ಆಚಾರ್ಯದೇವ ವಿರಚಿತ ಈ ಸಾಮಾಯಿಕ ಪಾಠವೆಂಬ ಮಹತ್ವಪೂರ್ಣವಾದ ಕೃತಿಯ ಮೂರನೆಯ ಆವೃತ್ತಿಯನ್ನು ಹೊರ ತರಲು ನಮಗೆ ಅತ್ಯಂತ ಸಂತೋಷವಾಗುತ್ತಿದೆ. ಏಕೆಂದರೆ ಇದನ್ನು ಪ್ರತಿಯೊಬ್ಬ ಜೈನ ಶ್ರಾವಕನು ಅವಶ್ಯವಾಗಿ ಅಧ್ಯಯನ ಮಾಡಬೇಕು. ಇದರಲ್ಲಿ ಸ್ವಯಂ ಆಚಾರ್ಯದೇವರು ಸಾಮಾಯಿಕವೆಂದರೇನು ? ಯಾರು ಮಾಡಬೇಕು ? ನಿಜವಾದ ಸಾಮಾಯಿಕವು ಯಾರಿಗೆ ಆಗುತ್ತದೆ. ನಿಜವಾದ ಸಾಮಾಯಿಕ ಮಾಡುತ್ತಿರುವ ಜೀವದ ಪರಿಣಾಮದಲ್ಲಿ ಆಗುವ ಉಜ್ವಲತೆ, ಭಗವಂತರ ಕುರಿತು ಅವನಲ್ಲಿ ಉಕ್ಕುವ ಯಥಾರ್ಥ ಭಕ್ತಿ ಹಾಗೂ ಸಾಮಾಯಿಕದಿಂದ ಪ್ರಾಪ್ತವಾಗುವ ಫಲದ ಬಗ್ಗೆ ತುಂಬಾ ಸುಂದರವಾಗಿ ವಿವೇಚನೆ ಮಾಡಿದ್ದಾರೆ. ಇದರ ಅರ್ಥವನ್ನು ಶ್ರೀ ರಾಮಜಿ ಮಾಣೇಕಚಂದ ದೋಶಿಯವರು ಗುಜರಾತಿಯಲ್ಲಿ ವಿಶದವಾಗಿ ಮಾಡಿದ್ದಾರೆ. ಅದನ್ನೇ ಬೆಳಗಾವಿಯ ಸ್ವ. ಧವಲಶ್ರೀ ಅಣ್ಣಾಸಾಹೇಬ ಪಾಟೀಲ ಇವರು ಸಮರ್ಪಕವಾಗಿ ಕನ್ನಡದಲ್ಲಿ ಇಳಿಸಿದ್ದಾರೆ.

ಇನ್ನು ಹಿಂದಿನ ಎರಡು ಆವೃತ್ತಿಗಳಲ್ಲಿ ಆಚಾರ್ಯದೇವರು ರಚನೆ ಮಾಡಿದ ಸಂಸ್ಕೃತ ಶ್ಲೋಕಗಳನ್ನೇ ಇಟ್ಟು ಉಳಿದ ಅನ್ವಯಾರ್ಥ ಮತ್ತು ವಿಶೇಷ ವಿವೇಚನೆಯನ್ನು ಕನ್ನಡದಲ್ಲಿ ತರಲಾಗಿತ್ತು. ಆದರೆ ಸಂಸ್ಕೃತ ಪದ್ಯಗಳನ್ನು ಪಠಿಸುವಾಗ ಜನ ಸಾಮಾನ್ಯರೆಲ್ಲರಿಗೂ ಆಚಾರ್ಯ ದೇವರು ಹೇಳಬಯಸಿದ ಭಾವ ಬೋಧೆಯಾಗುವುದು ಕಠಿಣವೂ, ಅಸಾಧ್ಯಸಮವಾಗಿತ್ತು. ಆದರೆ ಇಂದು ನಮ್ಮೆಲ್ಲರ ಮಹಾಭಾಗ್ಯದಿಂದ ಇಲ್ಲಿನ ಸಂಸ್ಕೃತ ಶ್ಲೋಕಗಳನ್ನು ಕನ್ನಡದಲ್ಲಿ ತರಲಾಗಿದೆ. ಈ ಸುಕಾರ್ಯವನ್ನು ಶ್ರೀಮಾನ್. ಎಂ. ಬಿ. ಪಾಟೀಲರವರೇ ಮಾಡಿದ್ದಾರೆ. ನಮ್ಮ ಸಂಸ್ಥೆಯು ಹಾಗೂ ಸಮಸ್ತ ಕನ್ನಡ ಜನತೆ ಅವರಿಗೆ ಎಷ್ಟೇ ಧನ್ಯವಾದಗಳನ್ನರ್ಪಿಸಿದರೂ ಕಡಿಮೆಯಿದೆ. ಅವರಿಂದ ಸಾಧ್ಯವಾದಷ್ಟು ನಮಗೆ ಲಾಭವಾಗಲಿಯೆಂದು ಕೇಳಿಕೊಳ್ಳುತ್ತೇವೆ.

ಇನ್ನು ಈ ಕಿರು ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಮಾಲಗತ್ತಿ ಪ್ರೆಸ್ಸಿನ ಮಾಲೀಕರಿಗೂ ಹಾಗೂ ಅಲ್ಲಿಯ ಕುಶಲ ಕರ್ಮಚಾರಿಗಳಿಗೂ ಹಾರ್ದಿಕ ಶುಭಾಶಯ ಸಲ್ಲಿಸುತ್ತೇವೆ.

**ಶ್ರೀ ಸಿ. ಬಿ. ಭಂಡಾರಿ**
ಅಧ್ಯಕ್ಷರು, ದಿಗಂಬರ ಜೈನ ಟ್ರಸ್ಟ, ಬೆಂಗಳೂರು.

## ನಮ್ಮ ಮಾತು

ಜೈನ ಪರಂಪರೆಯಲ್ಲಿ ಸಾಮಾಯಿಕದ ಮಾತನ್ನಂತೂ ಪ್ರತಿಯೊಂದು ಗ್ರಂಥದಲ್ಲಿ ಒಂದಿಲ್ಲೊಂದು ರೀತಿಯಿಂದ ಹೇಳಲಾಗಿದೆ. ಆದರೆ ಸಾಮಾಯಿಕ ಪಾಠವೆಂಬ ಸ್ವತಂತ್ರ ಕೃತಿಯನ್ನು ಬಹುಶಃ ಶ್ರೀ ಅಮಿತಗತಿ ಆಚಾರ್ಯದೇವರೇ ರಚಿಸಿದ್ದಾರೆಂಬುದು ನನ್ನ ಅನಿಸಿಕೆ.

ಸಾಮಾಯಿಕವು ಮುನಿ ಜೀವನದಲ್ಲೂ, ಶ್ರಾವಕ ಜೀವನದಲ್ಲೂ ಇದೆ. ಸಾಮಾಯಿಕದ ಸಂಕ್ಷಿಪ್ತ ಅರ್ಥವು ಭೇದವಿಜ್ಞಾನವಿದೆ. ಭಾವಕರ್ಮ, ದ್ರವ್ಯಕರ್ಮ ಮತ್ತು ನೋಕರ್ಮಗಳಿಂದ ರಹಿತನಾದ ಆತ್ಮನ ಅತೀಂದ್ರಿಯ ಆನಂದದ ಆಸ್ವಾದವೇ ಸಾಮಾಯಿಕವಿದೆ. ಸಾಮಾಯಿಕವು ಪಂಚಮ ಗುಣಸ್ಥಾನದಲ್ಲಿಯೇ ಆಗುತ್ತದೆ. ಮಿಥ್ಯಾದೃಷ್ಟಿಗಳಿಗೆಂದೂ ಆಗುವುದಿಲ್ಲವೆಂಬುದನ್ನು ಇಲ್ಲಿ ಆಚಾರ್ಯದೇವರು ಮೂವತ್ತೆರಡು ಶ್ಲೋಕಗಳ ಮೂಲಕ ಸುಂದರವಾಗಿ ಹೇಳಿದ್ದಾರೆ. ಅಂತೆಯೇ ಆಚಾರ್ಯ ಪದ್ಮನಂದಿ ಪ್ರಭುಗಳು ಪದ್ಮನಂದಿ ಪಂಚವಿಂಶತಿಯಲ್ಲಿ ಸಾಮಾಯಿಕದ ಕುರಿತು ಹೀಗೆ ಹೇಳುತ್ತಾರೆ -

**ಸಮತಾ ಸರ್ವಭೂತೇಷು ಸಂಯಮೇ ಶುಭ ಭಾವನಾ ।**
**ಆರ್ತರೌದ್ರ ಪರಿತ್ಯಾಗಸದ್ಧಿ ಸಾಮಾಯಿಕಂ ವ್ರತಮ್ ॥**

ಭಾವಾರ್ಥ :- ಆರ್ತ - ರೌದ್ರ ಧ್ಯಾನಗಳ ಪರಿತ್ಯಾಗವು ಸಮ್ಯಗ್ದರ್ಶನ ಸಂಪನ್ನ ಪುರುಷನಿಗೇ ಸಾಧ್ಯವಿದೆ. ಮಿಥ್ಯಾದೃಷ್ಟಿ ಪುರುಷರಿಗೆ ಎಂದರೆ ಇನ್ನೂ ಅನಂತಾನುಬಂಧಿ ಕಷಾಯ ಚೌಕಡಿಯ ವಿದ್ಯಮಾನತೆಯಿರುವವರಿಗೆ ಆರ್ತ-ರೌದ್ರ ಧ್ಯಾನಗಳ ತ್ಯಾಗವಾಗುವುದೇ ಇಲ್ಲ. ಆದುದರಿಂದ ಮಿಥ್ಯಾದೃಷ್ಟಿಗಳಿಗೆ ವಾಸ್ತವಿಕ ಸಾಮಾಯಿಕವಾಗುವ ಸಾಧ್ಯತೆಯಿಲ್ಲ. ಆದರಂತೆ ಅವರಿಗೆ ವಾಸ್ತವಿಕ ಸಮತಾಭಾವ ಹಾಗೂ ಸಂಯಮದ ವಿಷಯದಲ್ಲಿ ಶುಭ ವಿಚಾರಗಳೂ ಬರುವುದಿಲ್ಲ. ಸಾಮಾಯಿಕವೆಂದರೆ ತನ್ನ ಆತ್ಮನೊಡನೆ ಪರಿಚಯವನ್ನು ವೃದ್ಧಿಸಿಕೊಳ್ಳುವುದಿರುತ್ತದೆ. ಸಾಮಾಯಿಕ ಮಾಡುವಂಥ ಜೀವನು ಗೃಹಸ್ಥನಿದ್ದರೆ ಸಾಮಾಯಿಕದ ಸಮಯದಲ್ಲಿ ವಸ್ತ್ರದ ಉಪಸರ್ಗದಿಂದ ಯುಕ್ತನಿರುವ ಮುನಿಯ ಸಮಾನ ಯತಿ ಭಾವಕ್ಕೆ ಪ್ರಾಪ್ತನಾಗುತ್ತಾನೆ.

ಹೀಗೆ ಅನೇಕ ಆಚಾರ್ಯರು ಸಾಮಾಯಿಕದ ಮಹಿಮೆ ಹೇಳಿದ್ದಾರೆ. ಹಾಗೂ ಅದರ ಫಲರೂಪವಾದ ನಿರ್ಮಲ ಭಾವಕ್ಕೆ ಪ್ರಾಪ್ತರಾಗಿದ್ದಾರೆ. ಈ ಸಾಮಾಯಿಕ ಪಾಠದ ಅಧ್ಯಯನದ ಮೂಲಕ ನಮ್ಮೆಲ್ಲರಿಗೂ ನಿರ್ಮಲ ಭಾವದ ಪ್ರಾಪ್ತಿಯಾಗಲೆಂಬ ಪವಿತ್ರ ಭಾವದೊಂದಿಗೆ ವಿರಾಮ ಕೋರುತ್ತೇವೆ.

ಸೌ. ಧವಲಶ್ರೀ ಅ. ಪಾಟೀಲ
ಬೆಳಗಾವಿ.

ಶ್ರೀ ಅಮಿತಗತಿ ಆಚಾರ್ಯದೇವ ವಿರಚಿತ

# ಸಾಮಾಯಿಕ ಪಾಠ

**ಮಂಗಲಾಚರಣೆ - ಣಮೋಕಾರ ಮಂತ್ರ,**

**ಣಮೋ ಅರಹಂತಾಣಂ, ಣಮೋ ಸಿದ್ಧಾಣಂ,**
**ಣಮೋ ಆಯರಿಯಾಣಂ**
**ಣಮೋ ಉವಜ್ಝಾಯಾಣಂ,**
**ಣಮೋ ಲೋಏ ಸವ್ವಸಾಹೂಣಂ.**

**ಅರ್ಥ :-** ಅರಹಂತರಿಗೆ ನಮಸ್ಕಾರವಿರಲಿ, ಸಿದ್ಧರಿಗೆ ನಮಸ್ಕಾರವಿರಲಿ, ಆಚಾರ್ಯರಿಗೆ ನಮಸ್ಕಾರವಿರಲಿ, ಉಪಾಧ್ಯಾಯರಿಗೆ ನಮಸ್ಕಾರವಿರಲಿ ಮತ್ತು ಲೋಕದೊಳಗಿರುವ ಸರ್ವ ಸಾಧುಗಳಿಗೆ ನಮಸ್ಕಾರವಿರಲಿ,

**ಸಾಮಾಯಿಕ ಮಾಡುವ ಸಮ್ಯಕ್‌ದೃಷ್ಟಿ ಜೀವನ ಭಾವನೆಗಳ ಸ್ವರೂಪ ಎಲ್ಲ ಜೀವಗಳ ಕುರಿತು ಸದ್ಭಾವನೆ :**

**ಸತ್ತ್ವೇಷುಮೈತ್ರಿಂ ಗುಣಿಷುಪ್ರಮೋದಂ,**
**ಕ್ಲಿಷ್ಟೇಷು ಜೀವೇಷು ಕೃಪಾಪರತ್ವಮ್**
**ಮಾಧ್ಯಸ್ಥಭಾವಂ ವಿಪರೀತವೃತ್ತೌ,**
**ಸದಾ ಮಮಾತ್ಮಾ ವಿದಧಾತು ದೇವ ॥೧॥**

**ಅನ್ವಯಾರ್ಥ :-** (ದೇವ) ಓ ಜಿನೇಂದ್ರದೇವನೆ! (ಮಮ) ನನ್ನ (ಆತ್ಮಾ) ಆತ್ಮನು (ಸತ್ತ್ವೇಷು) ಪ್ರಾಣಿ ಮಾತ್ರರಲ್ಲಿ (ಮೈತ್ರಿ) ನಿರ್ವೈರ ಬುದ್ಧಿಯನ್ನು (ಗುಣಿಷು) ಗುಣಿ ಜೀವಗಳ ಕುರಿತು (ಪ್ರಮೋದಂ) ಪ್ರಮೋದ ಭಾವವನ್ನು (ಕ್ಲಿಷ್ಟೇಷು ಜೀವೇಷು) ದುಃಖಿ ಜೀವಗಳ ಕುರಿತು (ಕೃಪಾಪರತ್ವಂ) ಕರುಣಾಭಾವವನ್ನು ಮತ್ತು (ವಿಪರೀತ ವೃತ್ತೌ)

ವಿಪರೀತ ವೃತ್ತಿಯುಳ್ಳ ಜೀವಗಳ ಕುರಿತು (ಮಾಧ್ಯಸ್ಥ ಭಾವಂ) ಮಾಧ್ಯಸ್ಥ ಭಾವವನ್ನು (ಸದಾ) ನಿರಂತರವು (ವಿಧಧಾತು) ಧಾರಣ ಮಾಡಲಿ.

**ವಿಶೇಷಾರ್ಥ :-** ೧. ಸಾಮಾಯಿಕ ವ್ರತವು ಐದನೇ ಗುಣಸ್ಥಾನವುಳ್ಳ ಸಮ್ಯಕ್‌ದೃಷ್ಟಿ ಜೀವದ ಒಂದು ವ್ರತವಿದೆ. ಅದು ಶುಭ ಭಾವವಿದೆ. ಯಾರಿಗೆ ತನ್ನ ಆತ್ಮ ಸ್ವರೂಪದ ಪರಿಚಯವಿಲ್ಲ ಅವರಿಗೆ ನಿಜವಾದ ಸಾಮಾಯಿಕ ವ್ರತವು ಆಗುವುದೇ ಇಲ್ಲ.

೨. ಸಮ್ಯಕ್‌ದೃಷ್ಟಿ ಜೀವನು ತನ್ನನ್ನು ಆತ್ಮಸ್ವರೂಪದಲ್ಲಿ ಸ್ಥಿರ-ಗೊಳಿಸಲು ಅಸಮರ್ಥನಾದಾಗ ಆ ಜೀವನು ಈ ಶ್ಲೋಕದಲ್ಲಿ ಹೇಳಿದ ನಾಲ್ಕು ಪ್ರಕಾರದ ಭಾವನೆಗಳನ್ನು ಭಾವಿಸುತ್ತಾನೆ. ಈ ಭಾವನೆಗಳಲ್ಲಿರುವ ಶುಭ ರಾಗವನ್ನು ಅವನು ಧರ್ಮವೆಂದು ತಿಳಿಯದೆ ದೋಷವೆಂದೂ ಬಂಧದ ಕಾರಣವೆಂದೂ ತಿಳಿಯುತ್ತಾನೆ. ಈ ಸಮಯದಲ್ಲಿ ಸಮ್ಯಗ್ದರ್ಶನ-ಜ್ಞಾನದ ದೃಢತೆಯಾಗುತ್ತದೆ. ಅಶುಭ ರಾಗವಾಗುವುದಿಲ್ಲ. ಮತ್ತು ಶುಭರಾಗದ ಸ್ವಾಮಿತ್ವವು ವರ್ತಿಸುವುದಿಲ್ಲ. ಅದು ಧರ್ಮವಿದೆ.

೩. **ಮೈತ್ರಿಯ ಅರ್ಥವು ನಿರ್ವೈರ ಬುದ್ಧಿಯಿದೆ.** ಈ ಭಾವನೆಯು ತನ್ನ ಹಿತದ ಸಲುವಾಗಿ ಇದೆ. ಹೇಗೆಂದರೆ ಈ ಭಾವವಿರುವಾಗ ತನ್ನ ತೀವ್ರ ಕಷಾಯವು ದೂರವಾಗುವುದು. ಯಾರ ಸಲುವಾಗಿಯಾದರೂ ವೈರ ಭಾವವಿಟ್ಟುಕೊಳ್ಳುವುದು ಅದು ತನಗೇ ಅಹಿತವಿದೆ. ಒಂದು ಜೀವ ಇನ್ನೊಂದು ಜೀವಕ್ಕೆ ಹಿತ ಅಥವಾ ಅಹಿತ ಮಾಡುವ ಸಾಧ್ಯತೆಯೇ ಇಲ್ಲ. ಅದೇ ಪ್ರಕಾರ ಒಂದು ಜೀವ ಇನ್ನೊಂದು ಜೀವದೊಂದಿಗೆ ಮೈತ್ರಿಯನ್ನೂ ಮಾಡುವ ಸಾಧ್ಯತೆ ಇಲ್ಲ. ಆದರೆ ನಿರ್ವೈರ ಬುದ್ಧಿಯನ್ನಿಟ್ಟುಕೊಳ್ಳುವ ಸಾಧ್ಯತೆಯಿದೆ. ಅದಕ್ಕಾಗಿ ಮೈತ್ರಿಯ ಅರ್ಥವು ನಿರ್ವೈರ ಬುದ್ಧಿಯೆಂದು ತಿಳಿಯಬೇಕು.



೪. **ಗುಣೀ ಜೀವಗಳ ಕುರಿತು ಪ್ರಮೋದ ಭಾವ :** ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳನ್ನು ಧರಿಸಿದವರು ನಿಜವಾದ ಗುಣಿ ಜನರಿದ್ದಾರೆ. ಯಾರಲ್ಲಿ ಸಮ್ಯಗ್ದರ್ಶನವಿಲ್ಲ ಅವರು ನಿಜವಾದ ಗುಣಿ ಜನರಲ್ಲ. ಆತ್ಮಜ್ಞಾನಿ ಪುರುಷನೇ ನಿಜವಾಗಿ ಗುಣಿಯಿದ್ದಾನೆ. ಆತ್ಮಜ್ಞಾನರೂಪದ ಅಂತರ್ಭೇದವಿಲ್ಲದೆ ಬಾಹ್ಯದಲ್ಲಿ ತ್ಯಾಗೀ ಆಗಿದ್ದರೂ ಕೂಡ ಅವನು ಗುಣಿ ಇಲ್ಲ. **ಧರ್ಮದಲ್ಲಿ ವ್ಯಕ್ತಿಯ ಪೂಜೆಯಿರುವು-ದಿಲ್ಲ. ಗುಣದ ಪೂಜೆಯಿರುತ್ತದೆ** ಎಂಬುದನ್ನು ಈ ಭಾವನೆಯು ಸೂಚಿಸುತ್ತದೆ. ಗುಣಿ ಜನರ ಕುರಿತು ಇರುವ ಪ್ರಮೋದ ಭಾವವು ಅದು ನಿಜವಾಗಿ ತನ್ನ ಗುಣವನ್ನು ವೃದ್ಧಿಸುವ ಭಾವವಿದೆ. ಯಾವ ಆತ್ಮನಲ್ಲಿ ಸಮ್ಯಗ್ದರ್ಶನದ ರುಚಿಯಿದೆ ಆ ಆತ್ಮನಿಗೆ ಗುಣಿ ಜನರ ಕುರಿತು ಪ್ರಮೋದ ಭಾವವಾಗುವುದು. ಪ್ರಮೋದವು ಸಮ್ಯಕ್ ಗುಣಗಳ ಮಹಿಮೆಯನ್ನು ಸೂಚಿಸುತ್ತದೆ.

೫. **ದುಃಖೀ ಜೀವಗಳ ಕುರಿತು ಕರುಣೆ :** ದುಃಖದ ಮೂಲ ಕಾರಣವು ಮಿಥ್ಯಾತ್ವವಿದೆ ಎಂದರೆ ತನ್ನ ಸ್ವರೂಪದ ಭ್ರಾಂತಿಯಿದೆ. ಮಿಥ್ಯಾತ್ವವು ದೂರವಾಗುವವರೆಗೆ ಈ ಜೀವದ ದುಃಖವು ಎಂದೂ ದೂರವಾಗಲಾರದು. ಸುಖದ ಮೂಲವು ಸಮ್ಯಗ್ದರ್ಶನವಿದೆ. ಸಮ್ಯಕ್‌ದೃಷ್ಟಿ ಜೀವನಿಗೆ ದುಃಖಿ (ಮಿಥ್ಯಾದೃಷ್ಟಿ) ಜೀವಗಳ ಕುರಿತು ಯಥಾರ್ಥ ಕರುಣೆ ಇರುತ್ತದೆ. ಈ ಕರುಣಾ ಭಾವವನ್ನು ಜೀವನು ತನ್ನ ಹಿತದ ಸಲುವಾಗಿ ಮಾಡುತ್ತಾನೆ. ಓರ್ವ ಜೀವನು ಯಾವುದೇ ಪರಜೀವಕ್ಕೆ ಕರುಣೆ ಮಾಡುವ ಸಾಧ್ಯತೆಯಿಲ್ಲ. ಆದರೆ ತನ್ನ ಭಾವವನ್ನು ಸುಧಾರಿಸಿಕೊಳ್ಳುವ ಸಾಧ್ಯತೆಯಿದೆ. ಅದಕ್ಕಾಗಿಯೇ ಅರಹಂತ ಪ್ರಭು ಹಾಗೂ ಸಿದ್ಧ ಭಗವಂತರನ್ನು 'ಕರುಣಾಸಾಗರ'ರೆಂದು ಹೇಳಲಾಗುತ್ತದೆ. ತನ್ನಲ್ಲಿ ಕರುಣೆಯಿದ್ದು ಅನ್ಯ ಜೀವಗಳಿಗೆ ದುಃಖ ಕೊಡುವ ಭಾವವು ಇಲ್ಲದಿರುವಿಕೆಯೇ ದುಃಖೀ ಜೀವಗಳ ಕುರಿತು ಕರುಣೆಯಿದೆ.

**೬. ವಿಪರೀತ ವೃತ್ತಿಯುಳ್ಳ ಜೀವಗಳ ಕುರಿತು ಮಾಧ್ಯಸ್ಥತೆ :** ಯಾರಿಗೆ ಸಮ್ಯಗ್ದರ್ಶನದ ಕುರಿತು ಬದ್ಧ ಅರುಚಿಯಿದೆ. ಮಿಥ್ಯಾ ದರ್ಶನವನ್ನು ದೃಢವಾಗಿ ಸೇವಿಸುತ್ತಾರೆ. ಸಮ್ಯಗ್ದರ್ಶನರೂಪವಾದ ಆತ್ಮಕಲ್ಯಾಣದ ಬೋಧವನ್ನು ಕೇಳಿ ರೊಚ್ಚಿಗೇಳುತ್ತಾರೆ, ಆ ಜೀವರುಗಳು ವಿಪರೀತ ವೃತ್ತಿಯುಳ್ಳವರಿದ್ದಾರೆ. ಇಂಥವರು ತೀವ್ರ ರಾಗ-ದ್ವೇಷವುಳ್ಳವರಿದ್ದಾರೆ. ಅವರನ್ನು ನೋಡಿ ತನ್ನಲ್ಲಿ ದ್ವೇಷ ಭಾವವು ಉತ್ಪನ್ನವಾಗದೆ ಮಾಧ್ಯಸ್ಥ ಭಾವವು ಉಳಿಯಬೇಕೆಂದು ಸಮ್ಯಕ್‌ದೃಷ್ಟಿಯು ಭಾವಿಸುತ್ತಾನೆ.

**೭. ಸದಾ :** ಈ ಗಾಥೆಯಲ್ಲಿ ಹೇಳಿದ ಭಾವಗಳಿಗೆ ವಿರುದ್ಧವಾದ (ಅಶುಭ ಭಾವಗಳು) ನನಗೆ ಯಾವಾಗಲೂ ಬಾರದಿರಲಿ ಎಂಬುದನ್ನು ಈ ಸದಾ ಶಬ್ದವು ಸೂಚಿಸುತ್ತದೆ. ಈ ಭಾವಗಳು ಶುಭರಾಗವಿದ್ದು ಶುಭರಾಗವಂತೂ ವಿಕಾರೀ ಭಾವವಿರುವುದರಿಂದ ಯಾವತ್ತೂ ಹಾಗೇ ಉಳಿಯುವುದಿಲ್ಲ. ಆದುದರಿಂದ ಅವು ದೂರವಾಗಿ ನನಗೆ ಶುದ್ಧ ಭಾವವು ಪ್ರಕಟವಾಗಲಿ ಎಂಬುದು ಜ್ಞಾನಿಯ ಅಭಿಪ್ರಾಯವಿದೆ. ಮಿಥ್ಯಾದೃಷ್ಟಿಗೆ ಶುಭಭಾವವು ದೂರವಾದ ನಂತರ ನಿಯಮದಿಂದ ಅಶುಭಭಾವವಾಗುತ್ತದೆ. ಶುಭಭಾವವು ವಿಕಾರವಿದ್ದು ಅದು ಬದಲಾಗದೆ ಉಳಿಯಲಾರದು. ಆದುದರಿಂದ ಮಿಥ್ಯಾದೃಷ್ಟಿಗೆ ಆಗುತ್ತಿರುವ ಶುಭಭಾವವು ಅಲ್ಪ ಕಾಲದಲ್ಲಿ ದೂರವಾಗಿ ಅಶುಭ ಭಾವವಾಗದೆ ಇರಲಾರದು.

೮. ಪರದಲ್ಲಿ ಈ ಜೀವವು ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಜೀವವು ತಾನು ತನ್ನ ಭಾವವನ್ನು ಹೇಗೆ ಮಾಡಬೇಕೆಂಬುದನ್ನು ಇದರಲ್ಲಿ ಹೇಳಲಾಗಿದೆ. ಶ್ರೀ ಮೋಕ್ಷಶಾಸ್ತ್ರ (ತತ್ತ್ವಾರ್ಥಸೂತ್ರ)ದ ಏಳನೆಯ ಅಧ್ಯಾಯದಲ್ಲಿ ಶುಭಾಸ್ರವದ ವರ್ಣನೆ ಮಾಡುತ್ತ ಹನ್ನೊಂದನೆ ಸೂತ್ರದಲ್ಲಿ 'ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥಾನಿ ಚ ಸತ್ತ್ವಗುಣಾಧಿಕ ಕ್ಲಿಷ್ಯಮಾನಾವಿನಯೇಷು' ಎಂದು ಹೇಳಲಾಗಿದೆ



ಎಂದರೆ ಸತ್ತ್ವ, ಗುಣಾಧಿಕ, ಕ್ಲಿಷ್ಯಮಾನ-ದುಃಖಿ ಮತ್ತು ಅವಿನಯಿ (ಉದ್ಧಟ ಪ್ರಕೃತಿಧಾರಕ-ಮಿಥ್ಯಾದೃಷ್ಟಿ) ಜೀವಗಳ ಕುರಿತು ಅನುಕ್ರಮದಿಂದ ಮೈತ್ರಿ, ಪ್ರಮೋದ, ಕಾರುಣ್ಯ ಮತ್ತು ಮಾಧ್ಯಸ್ಥ ಭಾವನೆಯನ್ನು ಭಾವಿಸಬೇಕೆಂದು ಹೇಳಿದೆ. ಮತ್ತು ಅವುಗಳನ್ನು ನಿರಂತರವಾಗಿ ಚಿಂತನೆ ಮಾಡಬೇಕೆಂದು ಕೂಡ ಹೇಳಲಾಗಿದೆ.

೯. ಸಮ್ಯಕ್‌ದೃಷ್ಟಿಯು ತನ್ನ ಸ್ವರೂಪದಲ್ಲಿ ಸ್ಥಿರವಾಗಿ ಉಳಿಯಲು ಸಾಧ್ಯವಾಗದಿದ್ದಾಗ ಉಪಯೋಗವು ಪರದ ಕಡೆಗೆ ಹೋಗುವುದು. ಆಗ ತನ್ನಲ್ಲಿ ಅಶುಭ ಭಾವಗಳಾಗದಿರಲೆಂದು ಯಾವ ಭಾವಗಳನ್ನು ಭಾವಿಸುತ್ತಾನೆ, ಅವುಗಳನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ಈ ಭಾವಗಳಲ್ಲಿ ಪರ ಜೀವಗಳು ಕೇವಲ ನಿಮಿತ್ತ ಮಾತ್ರವಿವೆ. ಪರ ಜೀವಗಳು ಏನಾದರೂ ಮಾಡಿಸುತ್ತವೆಂದು ಈ ಶ್ಲೋಕದ ಅರ್ಥ ಮಾಡಿದರೆ ಅದು ನ್ಯಾಯ ವಿರುದ್ಧವಿದೆ. ಏಕೆಂದರೆ ಒಂದು ದ್ರವ್ಯವು ಇನ್ನೊಂದು ದ್ರವ್ಯದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಜ್ಞಾನೀ ಜೀವನಿಗೆ ಸರಾಗ ದಶೆಯಲ್ಲಿ ತನ್ನ ಉಪಯೋಗವು ಪರದ ಕಡೆಗಿರುವಾಗ ಎಂತಹ ಭಾವನೆಗಳಾಗುತ್ತವೆಂಬುದು ಈ ಶ್ಲೋಕದಿಂದ ತಿಳಿದು ಬರುತ್ತದೆ.

***ಸಮ್ಯಕ್‌ದೃಷ್ಟಿ ಜೀವನು ಸ್ವಸನ್ಮುಖನಾದಾಗ ಅವನು ಮಾಡುವ ಚಿಂತನೆ:***

***ಶರೀರತಃ ಕರ್ತ್ತುಮನಂತಶಕ್ತಿಂ,***
***ವಿಭಿನ್ನಮಾತ್ಮಾನಮಪಾಸ್ತದೋಷಮ್।***
***ಜಿನೇಂದ್ರ ! ಕೋಷಾದಿವ ಖಡ್ಗಯಷ್ಟಿಂ,***
***ತವ ಪ್ರಸಾದೇನ ಮಮಾಸ್ತು ಶಕ್ತಿಃ ೨।***

**ಅನ್ವಯಾರ್ಥ :-** (ಜಿನೇಂದ್ರ) ಓ ಜಿನೇಂದ್ರದೇವನೇ! (ಅನಂತಶಕ್ತಿಂ) ಅನಂತಶಕ್ತಿಯುಕ್ತ (ಅಪಾಸ್ತದೋಷಮ್) ದೋಷರಹಿತ-ಪರಿಪೂರ್ಣ (ಆತ್ಮಾನಮ್) ಆತ್ಮನು (ಕೋಷಾದಿಕ ಖಡ್ಗಯಷ್ಟಿಂ)

ಒರೆಯಿಂದ ಭಿನ್ನವಾದ ಖಡ್ಗದಂತೆ (ಶರೀರತಃ) ಶರೀರದಿಂದ (ವಿಭಿನ್ನಮ್) ಪರಿಪೂರ್ಣ ಭಿನ್ನ (ಕರ್ತ್ಯುಮ್) ಮಾಡುವಂಥ-ಅನುಭವಿಸುವಂಥ (ಶಕ್ತಿಂ) ಶಕ್ತಿ-ಸಾಮರ್ಥ್ಯವನ್ನು (ತವ) ತಾವು (ಪ್ರಸಾದೇನ) ಕೃಪೆ ಮಾಡಿ (ಮಮ) ನನಗೆ (ಅಸ್ತು) ಕರುಣಿಸಿರಿ.

**ವಿಶೇಷಾರ್ಥ :-** ೧) ಆತ್ಮನು ಚೈತನ್ಯಸ್ವರೂಪನಿದ್ದು ಶರೀರವು ಜಡವಿದೆ. ಆದಾಗ್ಯೂ ಅವೆರಡೂ ಒಂದೇ ಕ್ಷೇತ್ರದಲ್ಲಿವೆಯೆಂದು ಹೇಳಿದರೂ ಅವು ಭಿನ್ನವಿವೆ. ಏಕೆಂದರೆ ಅವು ನಿಜಕ್ಕೂ ಭಿನ್ನವಿರದೇ ಹೋದರೆ ಎಂದೂ ಭಿನ್ನವಾಗುವ ಸಾಧ್ಯತೆಯಿಲ್ಲ. ಯಾವ ಪ್ರಕಾರ ಖಡ್ಗವು ಒರೆಯಿಂದ ಭಿನ್ನವಿರುವುದರಿಂದಲೇ ಅದನ್ನು ಒರೆಯಿಂದ ಭಿನ್ನ ಮಾಡಲಾಗುತ್ತದೆ. ಅದೇ ಪ್ರಕಾರ ಆತ್ಮನು ಶರೀರದಿಂದ ಭಿನ್ನವಾಗಿದ್ದಾಗಲೇ ಆತ್ಮನ ಜ್ಞಾನದ ಬಲದಿಂದ ಎರಡರ ಸ್ವರೂಪವನ್ನು ತಿಳಿದು ಜೀವವನ್ನು ಶರೀರದಿಂದ ಭಿನ್ನ ಮಾಡಲಾಗುತ್ತದೆ. ಇಲ್ಲಿ ಆ ಜ್ಞಾನ ಬಲವನ್ನು ಪ್ರಕಟ ಮಾಡುವ ಭಾವನೆಯಿದೆ.

೨) ಶರೀರವು ಅನಂತ ಪುದ್ಗಲ ಪರಮಾಣುಗಳ ಪಿಂಡವಿದೆ. ಅದು ಅಚೇತನವಿದೆ. ಆತ್ಮನು ಅದರಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಜೀವ ಮತ್ತು ಶರೀರಗಳು ಪೂರ್ಣ ಭಿನ್ನ ಪದಾರ್ಥಗಳಿವೆಯೆಂಬುದನ್ನು ತಿಳಿದುಕೊಳ್ಳದವನಿಗೆ ಧರ್ಮದ ಪ್ರಾರಂಭವು ಸಾಧ್ಯವಿಲ್ಲ. ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳಿಂದ ಭಿನ್ನವಾದ ಪದಾರ್ಥಗಳು ಒಂದು ಇನ್ನೊಂದರಲ್ಲಿ ಏನನ್ನೂ ಮಾಡುವುದೇ ಇಲ್ಲ. ಶರೀರದಲ್ಲಿ ನಾನು ಏನಾದರೂ ಮಾಡಬಲ್ಲೆ ಅಥವಾ ಶರೀರದ ಕ್ರಿಯೆಯಿಂದ ಸಾಮಾಯಿಕ ಮೊದಲಾದವುಗಳಾಗುತ್ತವೆಂದು ಮನ್ನಿಸಿದರೆ ಅವನು ಜೀವ ಮತ್ತು ಶರೀರವನ್ನು ಭಿನ್ನವೆಂದು ಮನ್ನಿಸಿಯೇ ಇಲ್ಲ. ಆದುದರಿಂದ ಆ ಜೀವನಿಂದ ಧರ್ಮ ಅಥವಾ ಸಾಮಾಯಿಕಗಳಾಗಲಾರವು. ಮತ್ತು ಅವನು ಜೀವ ಹಾಗೂ ಶರೀರಗಳ ವಿಭಿನ್ನತೆಯನ್ನು ಕೂಡ ಮಾಡಲಾರನು. ಶರೀರದ



ಪ್ರತಿಯೊಂದು ರಜಕಣವು ಸ್ವತಂತ್ರ ದ್ರವ್ಯವಿದ್ದು ಜೀವ ಕೂಡ ಸ್ವತಂತ್ರ ದ್ರವ್ಯವಿರುವುದರಿಂದ ಜೀವನು ಶರೀರದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಅಷ್ಟೇ ಏಕೆ ರಜಕಣಗಳು ಜೀವದಲ್ಲಿ ಏನೂ ಮಾಡುವ ಸಾಧ್ಯತೆಯಿಲ್ಲ ಮತ್ತು ಒಂದು ರಜಕಣವು ಇನ್ನೊಂದು ರಜಕಣದಲ್ಲಿಯೂ ಏನನ್ನೂ ಮಾಡುವುದಿಲ್ಲ. ಅಂತೆಯೇ ಯಾವ ದ್ರವ್ಯವು ಇನ್ನೊಂದು ದ್ರವ್ಯಕ್ಕೆ ಲಾಭ-ಹಾನಿ ಮಾಡುವುದಿಲ್ಲ.

೩) ಮಾರ್ಗಸ್ಥ ಜೀವರುಗಳನ್ನು ಹೊರತುಪಡಿಸಿ ಸಮಸ್ತ ಸಂಸಾರಿ ಜೀವಗಳಿಗೆ ಮುಖ್ಯ ರೂಪದಿಂದ ಮೂರು ಶರೀರಗಳಿರುತ್ತವೆ. ಮನುಷ್ಯನಿಗೆ ಕಾರ್ಮಾಣ, ತೈಜಸ ಮತ್ತು ಔದಾರಿಕ ಎಂಬ ಮೂರು ಶರೀರಗಳಿವೆ. ಲಬ್ಧಿಧಾರಿ ಮುನಿಗಳಿಗೆ ನಾಲ್ಕನೆಯದಾಗಿ ಆಹಾರಕ ಶರೀರವಿದೆ. ಈ ಶರೀರಗಳಲ್ಲಿ ಯಾವ ಶರೀರವೂ ಜೀವನಿಗೆ ಲಾಭ ಅಥವಾ ಹಾನಿಗಳನ್ನು ಮಾಡುವುದೇ ಇಲ್ಲ. ಏಕೆಂದರೆ ಅವು ಜೀವನಿಂದ ಭಿನ್ನ ದ್ರವ್ಯಗಳೇ ಇವೆ. ಹೀಗೆ ಮೊದಲು ಯಥಾರ್ಥ ಜ್ಞಾನ ಮಾಡಿಕೊಳ್ಳುವುದು ಆವಶ್ಯಕವಿದೆ. ಈ ಜ್ಞಾನ ಮಾಡಿಕೊಳ್ಳದೆ ಜೀವದ ಪುರುಷಾರ್ಥವು ತನ್ನೆಡೆಗೆ ಎಂದೂ ತಿರುಗಲಾರದು. ಪರ ಸಂಯೋಗದ ಕಡೆಗೆಯೇ ತಿರುಗುತ್ತಿರುವುದರಿಂದ ಅವನಿಗೆ ಆತ್ಮಭಾವನೆಯು ಜಾಗೃತವಾಗಲಾರದು. ಆದ್ದರಿಂದ ಶರೀರ ಮೊದಲಾದ ಪರಪದಾರ್ಥಗಳಿಂದ ಲಕ್ಷ್ಯ ತೆಗೆದು ಶುದ್ಧ ಜ್ಞಾನಾನಂದಸ್ವರೂಪನಾದ ತನ್ನಾತ್ಮನ ಕಡೆಗೆ ಲಕ್ಷ್ಯ ಹರಿಸುವ ಅಭ್ಯಾಸಕ್ಕಾಗಿಯೇ ಈ ಭಾವನೆಯಿದೆ.

೪) ಜೀವನು ಸಮ್ಯಗ್ದರ್ಶನ ಪಡೆಯುವಲ್ಲಿ ವೀತರಾಗಿಯ ಉಪದೇಶವು ನಿಮಿತ್ತವಿದೆ ಮತ್ತು ಅಜ್ಞಾನಿಯ ಉಪದೇಶವು ಸಮ್ಯಗ್ದರ್ಶನದಲ್ಲಿ ಎಂದೂ ನಿಮಿತ್ತವಾಗುವುದಿಲ್ಲ - ಎಂಬುದನ್ನು **'ತಮ್ಮ ಕೃಪೆಯಿಂದ'** ಎಂಬ ಶಬ್ದವು ಸೂಚಿಸುತ್ತದೆ. ವೀತರಾಗಿ ಪುರುಷ ಅಥವಾ ವೀತರಾಗಿಯ ಉಪದೇಶವು ತನ್ನಾತ್ಮನ ಸ್ವರೂಪ ತಿಳಿದುಕೊಳ್ಳುವುದರಲ್ಲಿ

ಸಹಾಯಕವಿದೆ. ಅಥವಾ ಕೃಪೆಯಿದೆಯೆಂಬ ಮನ್ನಣೆಯು ಅಯಥಾರ್ಥವಿದೆ. ವೀತರಾಗಿ ಪುರುಷ ಹಾಗೂ ಅವರ ಉಪದೇಶ ಇವೆರಡೂ ಪರದ್ರವ್ಯಗಳಿರುವುದರಿಂದ ಇವು ಆತ್ಮನಿಗೆ ಲಾಭ ಮಾಡುವ ಸಾಧ್ಯತೆಯಿಲ್ಲ. ಆದರೆ ಸಮ್ಯಗ್ದರ್ಶನ ಪಡೆಯುವಲ್ಲಿ ವೀತರಾಗಿಯ ಉಪದೇಶವೇ ನಿಮಿತ್ತವಾಗಬಲ್ಲದೆಂಬ ಜ್ಞಾನ ಮಾಡಿಸುವುದಕ್ಕಾಗಿ ಮತ್ತು ಸಮ್ಯಕ್‌ದೃಷ್ಟಿಯ ರಾಗವು ವೀತರಾಗೀ ಪ್ರಭುಗಳಲ್ಲಿ ವರ್ತಿಸುವುದೆಂಬುದನ್ನು ಹೇಳುವುದಕ್ಕೋಸ್ಕರ ಈ ಶ್ಲೋಕದಲ್ಲಿ 'ತವಪ್ರಸಾದೇನ' - ತಮ್ಮ ಕೃಪೆಯಿಂದ ಎಂಬ ಪದವನ್ನು ಉಪಯೋಗಿಸಲಾಗಿದೆ.

**ಬಾಹ್ಯ ಸಂಯೋಗ-ವಿಯೋಗದ ಕುರಿತು ಸಮ್ಯಕ್‌ದೃಷ್ಟಿಯ ಭಾವನೆ:**

**ದುಃಖೇಸುಖೇವೈರಿಣಿಬಂಧುವರ್ಗೇ,**
**ಯೋಗೇ ವಿಯೋಗೇಭುವನೇ ವನೇವಾ.**
**ನಿರಾಕೃತಾಶೇಷಮಮತ್ವಬುದ್ಧೇಃ**
**ಸಮಂ ಮನೋಮೇಽಸ್ತುಸದಾಪಿ ನಾಥಃ ॥೩॥**

**ಅನ್ವಯಾರ್ಥ :-** (ನಾಥ) ಓ ಪ್ರಭು ! (ದುಃಖೇ ಸುಖೇ) ದುಃಖದಲ್ಲಿ ಅಥವಾ ಸುಖದಲ್ಲಿ (ವೈರಿಣಿ ಬಂಧುವರ್ಗೇ) ವೈರಿಗಳ ಕುರಿತು ಅಥವಾ ಬಂಧು ವರ್ಗದ ಕುರಿತು (ಯೋಗೇ, ವಿಯೋಗೇ) ಸಂಯೋಗದಲ್ಲಿ ಅಥವಾ ವಿಯೋಗದಲ್ಲಿ ಮತ್ತು (ಭುವನೇ ವಾ ವನೇ) ಮನೆಯಲ್ಲಿ ಇಲ್ಲವೆ ವನದಲ್ಲಿ (ನಿರಾಕೃತಾ ಅಶೇಷ ಮಮತ್ವಬುದ್ಧೇ) ಸಂಪೂರ್ಣ ಮಮತ್ವ ಬುದ್ಧಿಯು ದೂರವಾಗಿ (ಮೇ) ನನ್ನ (ಮನಃ) ಮನದಲ್ಲಿ (ಸದಾ ಅಪಿ) ಯಾವಾಗಲೂ (ಸಮಂ) ಸಮಭಾವವು (ಅಸ್ತು) ಇರಲಿ.

**ವಿಶೇಷಾರ್ಥ :-** ೧) ಜನರು ಬಾಹ್ಯ ಅನುಕೂಲತೆಗೆ ಸುಖ ಮತ್ತು ಬಾಹ್ಯ ಪ್ರತಿಕೂಲತೆಗೆ ದುಃಖವೆಂದು ಮನ್ನಿಸಿದ್ದಾರೆ. ಶರೀರ ಮೊದಲಾದ



ಯಾವುದೇ ಪರ ಪದಾರ್ಥದಿಂದ ಜೀವನಿಗೆ ಸುಖ-ದುಃಖಗಳಾಗಲಾರವೆಂದು ಆತ್ಮಜ್ಞಾನಿಯು ಮನ್ನಿಸುತ್ತಾನೆ. ಅಜ್ಞಾನಿಯು ಕೇವಲ ಕಲ್ಪನೆ ಮಾಡಿ ಅವುಗಳಿಗೆ ಅನುಕೂಲ ಪ್ರತಿಕೂಲವೆಂದು ಆರೋಪಿಸುತ್ತಾನೆ. ಜ್ಞಾನೀ ಜೀವನಂತೂ ತನ್ನ ಶುದ್ಧ ಭಾವವನ್ನು ಸುಖ-ಅನುಕೂಲ-ರೂಪವೆಂದು ಮತ್ತು ಶುಭ-ಅಶುಭ ಭಾವಗಳನ್ನು ದುಃಖ-ಪ್ರತಿಕೂಲ-ರೂಪವೆಂದು ಮನ್ನಿಸುತ್ತಾನೆ. ಯಾವುದೇ ಪರಜೀವಗಳು ತನ್ನ ಆತ್ಮನಿಗೆ ಶತ್ರು ಅಥವಾ ಮಿತ್ರರಾಗಲಾರರು. ಕೇವಲ ತನ್ನ ಶುದ್ಧ ಭಾವವೇ ಮಿತ್ರನು ಹಾಗೂ ಅಶುದ್ಧ-ಶುಭಾಶುಭ ಭಾವಗಳೇ ಶತ್ರುಗಳಿವೆ. ಜಡ-ಚೇತನಗಳ ಸಂಯೋಗ-ವಿಯೋಗಗಳಂತೂ ಜ್ಞೇಯ ಮಾತ್ರವಿವೆ. ನಿಜವಾದ ರೀತಿಯಿಂದಂತೂ ಯಾವುದೇ ಜಡ-ಚೇತನಗಳ ಸಂಯೋಗ-ವಿಯೋಗಗಳಾಗುವುದೇ ಇಲ್ಲ. ಏಕೆಂದರೆ ಪ್ರತಿಯೊಂದು ದ್ರವ್ಯವು ತನ್ನ ಸ್ವಕ್ಷೇತ್ರದಲ್ಲಿಯೇ ಇರುತ್ತದೆ. ಆ ದ್ರವ್ಯಗಳು ಸ್ವಯಂ ತಮ್ಮ ಕಾರಣದಿಂದ ಆಕಾಶದ ಕ್ಷೇತ್ರವನ್ನು ಬದಲಾಯಿಸಿಕೊಳ್ಳುತ್ತವೆ. ಹೀಗೆ ಪರದ್ರವ್ಯಗಳ ಕ್ಷೇತ್ರ ಬದಲಾವಣೆಯಿಂದ ಈ ಜೀವನಿಗೆ ಯಾವುದೇ ಲಾಭ-ಹಾನಿಗಳಾಗುವುದಿಲ್ಲ. ತಾನು ತನ್ನ ಸ್ವಭಾವದಲ್ಲಿ ಉಳಿಯುವುದು ಎಂದರೆ ಶುದ್ಧಭಾವ (ಏಕಾಕಾರರೂಪ)ವನ್ನು ಪ್ರಕಟಪಡಿಸಿಕೊಳ್ಳುವುದು. ಆಗ ತನ್ನಲ್ಲಿರುವ ಅಶುದ್ಧ ಭಾವಗಳನ್ನು ದೂರಮಾಡುವುದೇ ಜೀವನಿಗೆ ಲಾಭದ ಕಾರಣವಿದೆ. ಇಲ್ಲಿ ಕೂಡ ಅದೇ ಭಾವನೆಯಿದೆ. ಮನೆಯಿರಲಿ ಇಲ್ಲವೆ ವನವಿರಲಿ ಅವೆರಡೂ ಪರ ವಸ್ತುಗಳಿವೆ. ಅವೇನು ಈ ಜೀವನಿಗೆ ಲಾಭ-ಹಾನಿ ಮಾಡುವುದಿಲ್ಲೆಂದು ಜ್ಞಾನಿಯು ತಿಳಿಯುತ್ತಾನೆ.

೨) ವಸ್ತು ಸ್ವರೂಪದ ಯಥಾರ್ಥ ಮನ್ನಣೆಯಾದ ನಂತರ ಸಮ್ಯಗ್ದೃಷ್ಟಿ ಜೀವನು ಮೇಲೆ ಹೇಳಿದ ಪ್ರಕಾರ ಭಾವನೆ ಮಾಡುತ್ತಾನೆ. ಸಾಧಕ ದಶೆಯಲ್ಲಿ ಅವನಲ್ಲಿರುವ ರಾಗವು ಕ್ರಮದಿಂದ ದೂರವಾಗುತ್ತದೆ. ಎಲ್ಲಿಯವರೆಗೆ ರಾಗವಿರುತ್ತದೆ ಅಲ್ಲಿಯವರೆಗೆ ಲಕ್ಷ್ಯವು ಪರದ ಕಡೆಗೆ

ಹೋಗುತ್ತದೆ. ಆದುದರಿಂದ ಆ ರಾಗವನ್ನು ಮುರಿದು ಲಕ್ಷ್ಯವನ್ನು ತನ್ನೆಡೆಗೆ ತಿರುಗಿಸಿ ನಿರ್ವಿಕಲ್ಪ ಎಂದರೆ ರಾಗರಹಿತವಾದ ದಶೆಯನ್ನು ಪ್ರಕಟ ಮಾಡಿಕೊಳ್ಳುವುದಕ್ಕೋಸ್ಕರವಾಗಿ ಈ ಭಾವನೆಯನ್ನು ಭಾವಿಸುತ್ತಾನೆ.

೩) ಈ ಶ್ಲೋಕದಲ್ಲಿ 'ಅಶೇಷ' ಶಬ್ದವನ್ನು ಬಳಸಲಾಗಿದೆ. ಅದು ಅಭಿಪ್ರಾಯದೊಳಗಿಂದಂತೂ ಪರದ್ರವ್ಯದ ಬಗೆಗಿರುವ ಸಂಪೂರ್ಣ ಮಮತ್ವಬುದ್ಧಿಯು ದೂರವಾಗಿದೆ; ಆದರೆ ಚಾರಿತ್ರದೊಳಗಿರುವ ಸ್ವಲ್ಪ ಮಾತ್ರ ಮಮತ್ವವು ದೂರವಾಗಲಿ - ಎಂಬ ಭಾವವನ್ನು ಸೂಚಿಸುತ್ತದೆ.

೪) ಈ ಶ್ಲೋಕದಲ್ಲಿರುವ 'ಸದಾಪಿ' ಯಾವಾಗಲೂ ಶಬ್ದದ ಅರ್ಥವನ್ನು ಮೊದಲನೆಯ ಶ್ಲೋಕದ ಟೀಕೆಯಲ್ಲಿ ಹೇಳಿದ ಪ್ರಕಾರ ಇಲ್ಲಿಯೂ ತಿಳಿದುಕೊಳ್ಳುವುದು.

**ನನ್ನ ಲಕ್ಷ್ಯವು ಯಾವಾಗಲೂ ಜ್ಞಾನದ ಕಡೆಗೆ ಇರಲೆಂಬ ಭಾವನೆ:**

**ಮುನೀಶ ! ಲೀನಾವಿವ ಕೀಲಿತಾವಿವ,**
**ಸ್ಥಿರೌ ನಿಖಾತಾವಿವ ಬಿಂಬಿತಾವಿವ ।**
**ಪಾದೌ ತ್ವದೀಯೌ ಮಮತಿಷ್ಠತಾಂ ಸದಾ,**
**ತಮೋ ಧುನಾನೌ ಹೃದಿ ದೀಪಕಾವಿವ ॥೪॥**

**ಅನ್ವಯಾರ್ಥ :** (ಮುನೀಶ) ಓ ಮುನಿಗಳ ಸ್ವಾಮಿಯೇ ! ಜಿನೇಶನೇ! (ತ್ವದೀಯೌ ಪಾದೌ) ತಮ್ಮ ಎರಡೂ ಪಾದ ಕಮಲಗಳು (ಮಮ) ನನ್ನ (ಹೃದಿ) ಹೃದಯದಲ್ಲಿ (ಸದಾ) ಯಾವಾಗಲೂ ಇದೇ ಪ್ರಕಾರ (ತಿಷ್ಠತಾಮ್) ಇರಲಿ ಎಂದರೆ (ಲೀನೌ ಇವ) ಲೀನವಾಗಿ ಬಿಡಲಿ (ಕೀಲಿತೌ ಇವ) ಕೀಲಿತವಾಗಿ ಬಿಡಲಿ (ಸ್ಥಿರೌ ಇವ) ಸ್ಥಿರವಾಗಿ ಬಿಡಲಿ (ನಿಖಾತೌ ಇವ) ಒಂದಾಗಿ ಬಿಡಲಿ (ಬಿಂಬಿತೌ ಇವ) ಬಿಂಬಿಸಿದಂತೆ ಆಗಲಿ (ತಮೋ ಧುನಾನೌ) ಮೋಹಾಂಧಕಾರವನ್ನು ದೂರ ಮಾಡುವುದಕ್ಕೆ ಯೋಗ್ಯವಾದ (ದೀಪಕೌ ಇವ) ದೀಪದ ಸಮಾನವಾಗಿ ಬಿಡಲಿ.



**ವಿಶೇಷಾರ್ಥ :-** ೧) ಈ ಶ್ಲೋಕದೊಳಗೆ ತನ್ನ ಶುದ್ಧ ಸ್ವರೂಪದಲ್ಲಿ ಏಕಾಕಾರ ರೂಪದಿಂದ ಲೀನವಾಗುವ ಭಾವನೆಯಿದೆ. ಇಲ್ಲಿ ಜಿನೇಂದ್ರದೇವರ ಉಪದೇಶದ ನಿಮಿತ್ತದಿಂದ ಕಥನ ಮಾಡಲಾಗಿದೆ. ಏಕೆಂದರೆ ಸಮ್ಯಕ್ ದೃಷ್ಟಿಯು ಯಾವಾಗ ಸ್ವರೂಪದಲ್ಲಿ ಸ್ಥಿರವಾಗುವುದಿಲ್ಲವೋ ಆಗ ರಾಗವಾಗುತ್ತದೆ. ಆ ರಾಗದ ಕಾರಣದಿಂದ ಅವನ ಲಕ್ಷ್ಯವು ಭಗವಂತ ಮೊದಲಾದವರ ಕಡೆಗೆ ಹೋಗುತ್ತದೆ. ಆಗ ವಿನಯಪೂರ್ವಕವಾಗಿ ತನ್ನನ್ನು ಸ್ವರೂಪದೆಡೆಗೆ ತಿರುಗಿಸುವ ಭಾವನೆ ಮಾಡುತ್ತಾನೆ. ಭಗವಂತರಂತೂ ಪರದ್ರವ್ಯವಿರುವುದರಿಂದ ಅವರ ಚರಣಕಮಲಗಳು ಯಾವುದೇ ಅನ್ಯ ಜೀವದ್ರವ್ಯದಲ್ಲಿ ಪ್ರವೇಶ ಮಾಡುವುದಾಗಲಿ, ಸ್ಥಿರವಾಗುವುದಾಗಲಿ ಅಥವಾ ಏಕರೂಪವಾಗುವುದು ಇಲ್ಲವೆ ದೀಪದಂತೆ ಆಗುವುದಾಗಲಿ ಸಾಧ್ಯವಿಲ್ಲ. ಆದರೆ ಸಮ್ಯಕ್‌ದೃಷ್ಟಿ ಜೀವನಿಗೆ ನಿಜ ಸ್ವರೂಪದಲ್ಲಿ ಲೀನವಾಗುವ, ಸ್ಥಿರವಾಗುವ ಒಂದಾಗಿ ಹೋಗುವ ಮತ್ತು ಬಿಂಬಿಸಿ ಹೋಗುವ ಇಚ್ಛೆಯಿರುವುದರಿಂದ ಭಗವಂತರ ಕುರಿತು ಬಹುಮಾನದ ಕಾರಣ ಉಪಚಾರದಿಂದ ಕಥನ ಮಾಡಲಾಗಿದೆ.

೨. **'ಸದಾ'** ಯಾವಾಗಲೂ ಲೀನವಾಗುವ ಭಾವನೆ ಮಾಡಲಾಗಿದೆ. ಇದರಿಂದ ತಿಳಿದು ಬರುವುದೇನೆಂದರೆ ಜ್ಞಾನಿಗೆ ಶುಭಭಾವವನ್ನು ಕಾಯ್ದುಕೊಳ್ಳುವ ಭಾವವೇ ಇಲ್ಲ. ಆದರೆ ಅದನ್ನು ಭೇದಿಸಿ ಶುದ್ಧ ಭಾವದಲ್ಲಿ ಲೀನವಾಗುವ ಭಾವವಿದೆ.

೩) ಈ ಶ್ಲೋಕದಲ್ಲಿರುವ **'ತಮ'**: ಮೋಹ-ಅಂಧಕಾರವೆಂಬ ಶಬ್ದವು ಮಿಥ್ಯಾದರ್ಶನ ಮತ್ತು ಮಿಥ್ಯಾಚಾರಿತ್ರರೂಪವಾದ ಮೋಹವನ್ನು ದೂರ ಮಾಡುವಲ್ಲಿ ಭಗವಂತರ ವೀತರಾಗ ವಿಜ್ಞಾನವೇ ನಿಮಿತ್ತವಿದೆಯೆಂದು ಸೂಚಿಸುತ್ತದೆ. ಅಜ್ಞಾನಿಗಳ ಜ್ಞಾನವು ವಿಪರೀತವಿರುವುದರಿಂದ ಧರ್ಮದಲ್ಲಿ ಅದು ಎಂದೂ ನಿಮಿತ್ತ ಕೂಡ ಆಗುವ ಸಾಧ್ಯತೆಯಿಲ್ಲ.